ಬೆಂಗಳೂರು ನಗರದಲ್ಲಿ ಮಳೆಯಿಂದಾದ ಹಾನಿಗೆ ಪರಿಹಾರ ಮತ್ತು ಕಾಮಗಾರಿ ಬಗ್ಗೆ

5047 - ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಮಳೆಯಿಂದಾದ ಹಾನಿಯ ಬಗ್ಗೆ ಮಹಾನಗರ ಪಾಲಿಕೆಯು ಅಂದಾಜನ್ನು ತಯಾರಿಸಿದೆಯೇ ? ಹಾಗಿದ್ದಲ್ಲಿ ಈ ಹಾನಿಯ ಬಗ್ಗೆ ಪರಿಹಾರ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಮೊತ್ತದ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ ?

ಆ) ಈ ಪ್ರಸ್ತಾವನೆ ಮೇಲೆ ಸರ್ಕಾರ ಈವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ? ಈ ಹಣದಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು ?

ಇ) ಈ ಮಳೆಯಿಂದಾಗಿ ಗಾಂಧಿನಗರ ಕ್ಷೇತ್ರದಲ್ಲಿ ರಸ್ತೆ ಒಳಚರಂಡಿ ಇನ್ನಿತರ ಮಹಾನಗರ ಪಾಲಿಕೆಯ ಆಸ್ತಿಗಳು ಹಾಗೂ ಬಡಜನರ ಮನೆಗಳಿಗೆ ಹಾನಿಯಾಗಿರುವ ಬಗ್ಗೆ ಅಂದಾಜನ್ನು ತಯಾರಿಸಲಾಗಿದೆಯೇ ? ಹಾಗಿದ್ದಲ್ಲಿ ವಿವರಗಳನ್ನು ನೀಡುವುದು ?

ಈ) ಹಾನಿಗೊಳಗಾದಕ್ಕೆ ಒಳಚರಂಡಿ ಹಾಗೂ ಮನೆಗಳ ದುರಸ್ತಿಗೆ ಸರ್ಕಾರ ಇದುವರೆಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ? ಕೊಡಬೇಕಾದ ಬಾಕಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು. ರೂ. 12.00 ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೋರಿಕೆಯ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದೆ.

ಆ) ಹಣ ಬಿಡುಗಡೆಯಾಗಿಲ್ಲ.

ಇ) ಹೌದು. ಕಾಮಗಾರಿಯ ಪಟ್ಟಿಯನ್ನು ಲಗತ್ತಿಸಿದೆ.

ಈ) ಸರ್ಕಾರದಿಂದ ಹಣ ಬಿಡುಗಡೆ ಮಾಡಬೇಕಾಗಿದೆ.

ಗಾಂಧಿನಗರ ಕ್ಷೇತ್ರದಲ್ಲಿ ಕೈಗೊಳ್ಳಲಿರುವ ಕಾಮಗಾರಿಗಳ ಅಂದಾಜು ಪಟ್ಟಿ

1.	ಮಿನರ್ವ ಮಿಲ್ಲಿನ ಹಿಂದಗಡೆ ಇರುವ ಹಾಳಾದ ಮಳೆ ನೀರಿನ ಚರಂಡಿಯನ್ನು ಶಾಶ್ವತವಾಗಿ ರಕ್ಷಿಸುವ ಸಲುವಾಗಿ (800 ಮೀ. ಉದ್ದ) ಅಂದಾಜು ವೆಚ್ಚ (ಲಕ್ಷಗಳಲ್ಲಿ)	55.00
2.	ಮಿನರ್ವ ಮಿಲ್ಲಿನ ಹಿಂದಗಡೆ ಇರುವ ಹಾಳಾದ ಮಳೆ ನೀರಿನ ಚರಂಡಿಯ ತಾತ್ಕಾಲಿಕ ದುರಸ್ತಿಗೆ (800 ಮೀ. ಉದ್ದ) ಅಂದಾಜು ವೆಚ್ಚ (ಲಕ್ಷಗಳಲ್ಲಿ)	3.50

3.	ನಾರಾಯಣರಾವ್ ಸ್ಲಮ್‌ನಲ್ಲಿ ಬಿದ್ದು ಹೋದ ಮಳೆ ನೀರಿನ ಚರಂಡಿ ಗೋಡೆ ದುರಸ್ತಿ ಅಂದಾಜು ವೆಚ್ಚ (ಲಕ್ಷಗಳಲ್ಲಿ)	8.00
4.	ಸೇವಾಶ್ರಮದಲ್ಲಿನ ಮಳೆ ನೀರಿನ ಚರಂಡಿ ದುರಸ್ತಿ ಅಂದಾಜು ವೆಚ್ಚ (ಲಕ್ಷಗಳಲ್ಲಿ)	6.00
5.	ರೈಲ್ವೆ ಲೈನಿಗೆ ರೀಟೈನಿಂಗ್ ಗೋಡೆಯ ಮೇಲಿನ ಸಣ್ಣ ಗೋಡೆ ರಿಪೇರಿ (300 ಅಡಿ ಉದ್ದ) ಅಂದಾಜು ವೆಚ್ಚ (ಲಕ್ಷಗಳಲ್ಲಿ)	6.00
6.	ರೈಲ್ವೆ ಲೈನಿಗೆ ಸಮಾಂತರವಾಗಿ ಇರುವ ರಸ್ತೆಯಲ್ಲಿ ನೀರು ಜಿನುಗುವುದನ್ನು ತಪ್ಪಿಸಲು ಮೋರಿ ನಿರ್ಮಾಣ, ಅಂದಾಜು ವೆಚ್ಚ (ಲಕ್ಷಗಳಲ್ಲಿ)	10.00
7.	ಮನ್‌ವರ್ತ ಪೇಟೆಯಲ್ಲಿನ ಮುಖ್ಯ ರಸ್ತೆಯಲ್ಲಿನ ಚರಂಡಿಗೆ ಕಲ್ಲು ಗೋಡೆ ಕಟ್ಟುವ ಕಾಮಗಾರಿ, ಅಂದಾಜು ವೆಚ್ಚ (ಲಕ್ಷಗಳಲ್ಲಿ)	10.00
8.	ಅಂಜನಪ್ಪ ಗಾರ್ಡನ್ ಮತ್ತು ಭಕ್ಷಿ ಗಾರ್ಡನ್‌ಗಳಲ್ಲಿನ ಮಳೆ ನೀರಿನ ಚರಂಡಿಯ ದುರಸ್ತಿ ಕಾರ್ಯಕ್ಕೆ ಅಂದಾಜು ವೆಚ್ಚ (ಲಕ್ಷಗಳಲ್ಲಿ)	5.00
9.	ಸೇತುರಾವ್ ಬೀದಿ, ಗುಂಡೋಪಂತ ಬೀದಿ ರಸ್ತೆ ಮತ್ತು ಎಸ್‌ಕೆಆರ್ ಮಾರ್ಕೆಟ್‌ನ ಸುತ್ತಲೂ ನೀರು ನಿಲ್ಲುವಿಕೆಯನ್ನು ತಪ್ಪಿಸುವ ಸಲುವಾಗಿ, ಅಂದಾಜು ವೆಚ್ಚ (ಲಕ್ಷಗಳಲ್ಲಿ)	3.00
10.	ಸೌರಾಷ್ಟ್ರ ಪೇಟೆಯಲ್ಲಿ ಕಲ್ಲಿನ ಮೋರಿಯನ್ನು ಕಟ್ಟುವುದು	10.00
11.	ಅಂಧರ ಶಾಲೆ ಪಕ್ಕದಲ್ಲಿ (ಕಿನೋ ಥಿಯೇಟರ್ ಹತ್ತಿರ) ನೆಹರೂ ನಗರದ ಮೂರನೇ ಅಡ್ಡರಸ್ತೆಯ ಉದ್ದಕ್ಕೂ ಬಿದ್ದಿರುವ ಮೋರಿ ಮೇಲಿನ ಚಪ್ಪಡಿಗಳನ್ನು ಅಳವಡಿಸುವುದು	3.00
12.	ಶಂಕರಪ್ಪ ಗಾರ್ಡನ್‌ನಲ್ಲಿ ನೀರು ನಿಲ್ಲುವುದನ್ನು ತಪ್ಪಿಸಲು ಅಡ್ಡ ಮೋರಿಗಳ ನಿರ್ಮಾಣ ಮತ್ತು ಅಭಿವೃದ್ಧಿ	5.50
13.	14ನೇ ಅಡ್ಡ ರಸ್ತೆ, ಎಲ್.ಎನ್. ಪುರದಲ್ಲಿಯ 6ನೇ (ಬಿ) ಅಡ್ಡ ರಸ್ತೆಯ, ಮುದ್ದಪ್ಪ ಗಾರ್ಡನ್, ಹಾನಿಗೀಡಾದ ಮೋರಿಯ ದುರಸ್ತಿ ಕೆಲಸ (ಸಾರಾಯಿ ಅಂಗಡಿಯ ಹತ್ತಿರ)	5.00
14.	14ನೇ ಅಡ್ಡ ರಸ್ತೆ, ಎಲ್.ಎನ್. ಪುರದಲ್ಲಿಯ (6ನೇ (ಬಿ) ಅಡ್ಡ ರಸ್ತೆಯ, ಮುದ್ದಪ್ಪ ಗಾರ್ಡನ್), ಹಾನಿಗೀಡಾದ ಮೋರಿಯ ದುರಸ್ತಿ ಕೆಲಸ, (ಕಾರ್ಯಾಗಾರದ ಹಿಂಭಾಗ)	5.00